# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 7 (33)
ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)
ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
ಉತ್ತರಿಸಬೇಕಾದ ದಿನಾಂಕ : 27.01.2026

| | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಬೆಳೆಗಳು ಬೇಗನೆ ಹಾಳಾಗುವುದನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಶೈತ್ಯಾಗಾರ ಘಟಕಗಳನ್ನು (Cold Storage) ಹೆಚ್ಚಿಸಲು ಸರ್ಕಾರ ನೀಡುತ್ತಿರುವ ಸಬ್ಸಿಡಿ ಎಷ್ಟು; ಈ ವರ್ಷ ಎಷ್ಟು ಹೊಸ ಘಟಕಗಳಿಗೆ ಅನುಮೋದನೆ ನೀಡಲಾಗಿದೆ. | ತೋಟಗಾರಿಕೆ ಬೆಳೆಗಳು ಬೇಗನೆ ಹಾಳಾಗುವುದನ್ನು ತಡೆಯಲು ಶೈತ್ಯಾಗಾರ ಘಟಕಗಳನ್ನು (Cold Storage) ಹೆಚ್ಚಿಸಲು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ - ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೈತರು/ಉದ್ದಿಮೆದಾರರು/ ರೈತ ಉತ್ಪಾದಕ ಸಂಸ್ಥೆ (FPO) ಗಳಿಗೆ ಶೈತ್ಯಾಗಾರ/ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಿಸಲು ಉತ್ತೇಜನ ನೀಡಲಾಗುತ್ತಿದೆ.<br>ಏಕ ಉತ್ಪನ್ನದ ಶೇಖರಣೆಗೆ (Type-1) ನಿರ್ಮಿಸಲಾಗುವ ಶೀತಲಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್ ಗೆ ರೂ. 9,600/- ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್ ಗೆ ರೂ.3,360/- ಸಹಾಯಧನ ನೀಡಲಾಗುವುದು. ಬಹು ಉತ್ಪನ್ನದ ಶೇಖರಣೆಗೆ (Type -2) ನಿರ್ಮಿಸಲಾಗುವ ಶೀತಲ ಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್ ಗೆ ರೂ.12,000/- ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್ ಗೆ ರೂ.4,200/- ಸಹಾಯಧನ ನೀಡಲಾಗುವುದು. ಕನಿಷ್ಠ 500 ಮೆಟ್ರಿಕ್ ಟನ್ ನಿಂದ ಗರಿಷ್ಠ 5000 ಮೆಟ್ರಿಕ್ ಟನ್ ಸಾಮರ್ಥ್ಯದ ಶೈತ್ಯಾಗಾರ ನಿರ್ಮಿಸಬಹುದು. ಈ ವರ್ಷ 11 ಶೈತ್ಯಾಗಾರ ಘಟಕಗಳಿಗೆ ಅನುಮೋದನೆ ನೀಡಲಾಗಿದೆ.<br>To prevent horticultural produce from quick spoilage, incentive is being provided to increase cold storage facility, under the Mission for Integrated Development of Horticulture - National Horticulture Mission (MIDH-NHM) scheme to farmers, entrepreneurs, and Farmer Producer Organizations (FPOs) are being encouraged to establish cold storage units.<br>For Type 1 cold storage (single-commodity storage) the unit cost is ₹9,600 per metric tonne, of which 35%, i.e., ₹3,360 per metric tonne, is provided as subsidy. For Type 2cold storage(multi-commodity storage), the unit cost is ₹12,000 per metric tonne, of which 35%, i.e., ₹4,200 per metric tonne, is provided as subsidy.Cold storage units with a minimum capacity of 500 metric tonnes and a maximum capacity of 5,000 metric tonnes are eligible. During the current financial year, 11 cold storage units have been approved. |

| | | |
|---|---|---|
| ಆ) | ತೋಟಗಾರಿಕೆ ಇಲಾಖೆಯಡಿ ಹನಿ ನೀರಾವರಿ ಅಳವಡಿಸಿಕೊಳ್ಳಲು ರೈತರಿಗೆ ನೀಡಲಾಗುವ ಸಹಾಯಧನದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಪ್ರಸಕ್ತ ವರ್ಷದಲ್ಲಿ ಹನಿ ನೀರಾವರಿ ಸೌಲಭ್ಯ ಪಡೆದಿರುವ ಎಲ್ಲಾ ರೈತರಿಗೆ ಕೇಂದ್ರ ಪಾಲು ಹಾಗೂ ರಾಜ್ಯ ಕಡ್ಡಾಯ ಪಾಲಿನ ಅನುದಾನವನ್ನು ನೀಡಲಾಗಿದೆ. ಹೆಚ್ಚುವರಿ ರಾಜ್ಯ ಪಾಲಿನ (TOP UP) ಅನುದಾನವು ಬಿಡುಗಡೆಗೆ ಬಾಕಿ ಇದೆ. ಈ ಕುರಿತಂತೆ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಮುಂದುವರೆದು, 2024-25ನೇ ಸಾಲಿನಿಂದ ಹನಿ ನೀರಾವರಿ ಯೋಜನೆಯಡಿ 7 ವರ್ಷದ ನಂತರ ಅದೇ ಜಮೀನಿಗೆ ಸಹಾಯಧನವನ್ನು ಒದಗಿಸಲು ಅನುಮತಿಸಲಾಗಿದೆ. ಹೀಗಾಗಿ ಹೆಚ್ಚಿನ ರೈತರಿಂದ ಅರ್ಜಿಗಳು ಬಂದಿದ್ದು ಜೇಷ್ಠತಾ ಆಧಾರದ ಮೇಲೆ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಅಲ್ಲದೇ ಹೆಚ್ಚುವರಿಯಾಗಿ ರೂ 62.00 ಕೋಟಿ ಅನುದಾನವನ್ನು ತೋಟಗಾರಿಕೆ ಇಲಾಖೆಗೆ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>In the current year, all farmers who have received drip irrigation facilities have been provided with the central share and the mandatory state share. The additional state share (TOP-UP) subsidy is pending for release. In this regard, proposal has been submitted to the Finance Department for release of the funds.<br><br>Further, from the year 2024–25, under the drip irrigation scheme, it has been permitted to provide subsidy for the same land after 7 years. Hence, applications have been received from large number of farmers. Subsidy is being provided to farmers based on seniority. In addition, a proposal has been submitted to the Central Government to provide an additional grant of ₹62.00 crore to the Horticulture Department. |

HORTI 27 HGM 2026

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

## ಅನುಭಂಧ

### 2025-26 ಸಾಲಿನ ಶೈತ್ಯಾಗಾರದ ವಿವರಗಳು (Rs. In Lakhs)

| SL No. | District | Year | Project Name & Adress | Capacity (MT) | Subsidy amount |
|---|---|---|---|---|---|
| 1 | Davanagere | 2025-26 | M/s Sri Basavakalyana Cold Storage Type-1 Sy. no. 165/4 Beture Village, Davanagere Taluk and District | 3000 | 84.00 |
| 2 | Hassan | 2025-26 | M/s Maruthi Cold Storage, Sy No:79, Chavalagere village, Kasaba Hobli, Alur taluk, Hassan District | 1097 | 68.49 |
| 3 | Shivamogga | 2025-26 | M/s Bhavani Cold Storage Type-1Sy. no. 87 Mandaghatta Village, Kumsi Hobli, Shivamogga Taluk and District | 5000 | 140.00 |
| 4 | Bengauru Urban | 2025-26 | M/s SSV Cold Storage, #73, NEW#73/1, Hullegowdana halli village Sondekoppa road, Dasanapura hobli Nelamangala, Bengaluru urban | 3840 | |
| 5 | Bengauru Urban | 2025-26 | M/s Royal Cold Storage and Warehousing , Bidrahalli Bengaluru East | 3475 | 837.22 |
| 6 | Ramanagara | 2025-26 | M/s Pearllinc Cold Storage , Harohalli Industriel Area Kanakapura Ramanagara | 4333 | |
| 7 | Belagavi | 2025-26 | M/s Savitha Mallikarjun Cold Storage , Uchagaom to belagavi | 3000 | |
| 8 | Vijayapura | 2025-26 | M/s Murari ramana narayana Cold Storage , Nagatana Bijapura | 3500 | |
| 9 | Vijayapura | 2025-26 | M/s Sathyajith Shivanand Patil Cold Storage Thikkaol to Bijapura | 3150 | |
| 10 | Chitradurga | 2025-26 | M/s Lakshmikanth Cold Storage, Hiriyur Chitradurga | 3000 | |
| 11 | Mysore | 2025-26 | Gayathri, Essence India, KIADB, Addakanahalli Industrial Area, S.no 386, Immavu Village, Mysore | 2000 | |
| | | | Total | 35395.00 | 1129.71 |

## ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ-ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಪ್ರತಿ ಹನಿಗೆ ಅಧಿಕ ಬೆಳೆ ಕಾರ್ಯಕ್ರಮ (PM-RKVY-PDMC)

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ-ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಪ್ರತಿ ಹನಿಗೆ ಅಧಿಕ ಬೆಳೆ ಕಾರ್ಯಕ್ರಮ (PM-RKVY-PDMC)ವು ಭಾರತ ಸರ್ಕಾರದ ಪ್ರಮುಖ ಮಹತ್ವಕಾಂಕ್ಷಿ ಯೋಜನೆಯಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಈ ಯೋಜನೆಯಡಿ ರಾಜ್ಯದ ವಿವಿಧ ವರ್ಗದ ರೈತರಿಗೆ ಅಂದರೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.55 ರಷ್ಟು ಹಾಗೂ ಇತರೆ ರೈತರಿಗೆ ಶೇ.45ರಷ್ಟು ಸಹಾಯಧನದ ಮಾದರಿಯಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಒದಗಿಸುವ ಅನುದಾನವನ್ನು 60:40 ರ ಅನುಪಾತದಲ್ಲಿ ನೀಡಲಾಗುವುದು. ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಕೇಂದ್ರ ಹಾಗೂ ರಾಜ್ಯ ಪಾಲಿನ ಅನುಪಾತದ ವಿವರ ಈ ಕೆಳಕಂಡಂತಿದೆ.

| ರೈತರ ವರ್ಗ | ಕೇಂದ್ರ ಪಾಲು (%) | ರಾಜ್ಯ ಪಾಲು (%) | ಒಟ್ಟು (%) |
|---|---|---|---|
| ಸಣ್ಣ ಹಾಗೂ ಅತೀ ಸಣ್ಣ | 33 | 22 | 55 |
| ಇತರೆ | 27 | 18 | 45 |
| ಒಟ್ಟು | 60 | 40 | 100 |

ಆದರೆ ರಾಜ್ಯ ಸರ್ಕಾರವು ಸೂಕ್ಷ್ಮ ನೀರಾವರಿಯ ಪ್ರಾಮುಖ್ಯತೆ ಹಾಗೂ ಅಗತ್ಯತೆಯನ್ನು ಅರಿತು ರೈತರ ಹಿತದೃಷ್ಟಿಯಿಂದ ತನ್ನ ಪಾಲನ್ನು ಹೆಚ್ಚಿಸಿ ಎಲ್ಲಾ ವರ್ಗದ ರೈತರಿಗೆ ಮೊದಲ 2.00 ಹೆಕ್ಟೇರ್ ಪ್ರದೇಶದವರೆಗೆ ಶೇ.90ರಷ್ಟು ಹಾಗೂ ನಂತರದ 3.00 ಹೆಕ್ಟೇರ್‌ವರೆಗೆ (ಒಟ್ಟುಗರಿಷ್ಠ 5.00 ಹೆಕ್ಟೇರ್)ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ವರ್ಗದವರಿಗೆ ಶೇ.45ರಷ್ಟು ಸಹಾಯಧನವನ್ನು ಗರಿಷ್ಠ ಮಿತಿಗೆ ಒಳಪಟ್ಟು ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿ ಸದರಿ ಯೋಜನೆಯಡಿ ಒದಗಿಸುತ್ತಿರುವ ಕೇಂದ್ರ ಪಾಲು, ರಾಜ್ಯ ಕಡ್ಡಾಯ ಪಾಲು ಮತ್ತು ರಾಜ್ಯ ಹೆಚ್ಚುವರಿ ಪಾಲಿನ ಅನುಪಾತದ ವಿವರ ಈ ಕೆಳಕಂಡಂತಿದೆ.

| ವರ್ಗ | ಕೇಂದ್ರಪಾಲು (%) | ರಾಜ್ಯಪಾಲು (%) | | | ಒಟ್ಟು (%) |
|---|---|---|---|---|---|
| | | ಕಡ್ಡಾಯವಾಗಿನೀಡಬೇಕಾದಪಾಲು | ಹೆಚ್ಚುವರಿಪಾಲು | ಒಟ್ಟುರಾಜ್ಯಪಾಲು | |
| 2.00 ಹೆಕ್ಟೇರ್‌ವರೆಗಿನಸಹಾಯಧನ | | | | | |
| ಎಲ್ಲಾ ರ್ಗದ ೖತರಿಗೆ | 33 | 22 | 35 | 57 | 90 |
| 2.00 ಹೆಕ್ಟೇರ್ ಮೇಲ್ಪಟ್ಟು ಸಹಾಯಧನ [2.00 ಹೆಕ್ಟೇರ್ ಮೇಲ್ಪಟ್ಟು 5.00 ಹೆಕ್ಟೇರ್ ವರೆಗೂ] | | | | | |
| ಎಲ್ಲಾ ರ್ಗದ ೖತರಿಗೆ | 27 | 18 | - | 18 | 45 |

ಕೇಂದ್ರದಿಂದ ನಿಗದಿಯಾಗಿರುವ ರೂ.44211.75 ಲಕ್ಷಗಳ ಅನುದಾನದಲ್ಲಿ ತೋಟಗಾರಿಕೆ ಇಲಾಖೆಗೆ ಕೇಂದ್ರ ಪಾಲು ರೂ. 20204.18 ಲಕ್ಷಗಳು, ರಾಜ್ಯ ಕಡ್ಡಾಯ ಪಾಲು ರೂ. 13469.45 ಲಕ್ಷಗಳುಹಾಗೂ ಹೆಚ್ಚುವರಿ ರಾಜ್ಯ ಪಾಲು ರೂ. 20892.96 ಲಕ್ಷಗಳು ಸೇರಿದಂತೆ ಒಟ್ಟಾರೆಯಾಗಿ ರೂ. 54566.59 ಲಕ್ಷಗಳು ಲಭ್ಯವಿದ್ದು, ಉಪ-ಶೀರ್ಷಿಕೆವಾರು ವಿವರಗಳು ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| | ವರ್ಗ | ಕೇಂದ್ರ ಪಾಲು | ರಾಜ್ಯ ಪಾಲು | | | ಒಟ್ಟು (ಕೇಂದ್ರ + ರಾಜ್ಯ) |
|---|---|---|---|---|---|---|
| | | | ಕಡ್ಡಾಯ | ಹೆಚ್ಚುವರಿ | ಒಟ್ಟು | |
| | | 1 | 2 | 3 | 4=(2+3) | 5=(1+4) |
| ತೋಟಗಾರಿಕೆ ಇಲಾಖೆ | Admin-059 | 505.10 | 336.74 | 0.00 | 336.74 | 841.84 |
| | Other-106 | 14829.86 | 9886.58 | 15728.64 | 25615.22 | 40445.08 |
| | SCSP-422 | 3465.02 | 2310.01 | 3675.02 | 5985.03 | 9450.04 |
| | TSP-423 | 1404.16 | 936.13 | 1489.29 | 2425.42 | 3829.61 |
| | Total | 20204.18 | 13469.45 | 20892.95 | 34362.40 | 54566.58 |

**ತೋಟಗಾರಿಕೆ ಇಲಾಖೆಗೆ ಬಿಡುಗಡೆಯಾದ ಒಟ್ಟು ಅನುದಾನದವಿವರ**

(ರೂ. ಲಕ್ಷಗಳಲ್ಲಿ)

| Category | ಕೇಂದ್ರ ಪಾಲು | ರಾಜ್ಯ ಕಡ್ಡಾಯ ಪಾಲು | ರಾಜ್ಯ ಹೆಚ್ಚುವರಿ ಪಾಲು | ಒಟ್ಟು |
|---|---|---|---|---|
| 106 | 13053.48 | 8702.32 | 3795.00 | 25550.80 |
| 422 | 2630.51 | 1753.67 | 857.50 | 5241.68 |
| 423 | 1058.31 | 705.54 | 347.50 | 2111.35 |
| ಒಟ್ಟು | 13053.48 | 8702.32 | 5000.00 | 32903.83 |

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ-ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಪ್ರತಿ ಹನಿಗೆ ಅಧಿಕ ಬೆಳೆ ಕಾರ್ಯಕ್ರಮದಡಿ 2024-25ನೇ ಸಾಲಿನವರೆಗೂ ಬಿಡುಗಡೆಗೆ ಬಾಕಿ ಇರುವ ರಾಜ್ಯ ಹೆಚ್ಚುವರಿ ಪಾಲಿನ ಅನುದಾನ ರೂ.9729.55 ಲಕ್ಷಗಳು ಹಾಗೂ 2025-26ನೇ ಸಾಲಿನ ಮೊದಲನೇ ಮತ್ತು ಎರಡನೇ ಕಂತಿನಲ್ಲಿ ತೋಟಗಾರಿಕೆ ಇಲಾಖೆಗೆ ಹಂಚಿಕೆಯಾದ ಮೊತ್ತಕ್ಕನುಗುಣವಾಗಿ ಬಿಡುಗಡೆಯಾಗಬೇಕಾಗಿರುವ ರಾಜ್ಯ ಹೆಚ್ಚುವರಿ ಪಾಲಿನ (Topup 35%) ಅನುದಾನ ರೂ. 16321.00 ಲಕ್ಷಗಳು ಸೇರಿದಂತೆ ಒಟ್ಟಾರೆ ರೂ. 26050.00 ಲಕ್ಷಗಳನ್ನು PM-RKVY-PDMC ಯೋಜನೆಯ ಲೆಕ್ಕ ಶೀರ್ಷಿಕೆ 2401-00-108-2-59ರಡಿ ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಬೇಕಾಗಿರುತ್ತದೆ. ಸದರಿ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.